ಓ.ಎಸ್. ನಂ. 122/2015

ಪಿ.ಡಬ್ಲ್ಯು: 02 (Obanna)

ದಿನಾಂಕ: 04.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ – ಶ್ರೀ KJG ವಕೀಲರಿಂದ.

ಈ ದಾವೆಯನ್ನು ಪಾಪಮ್ಮ ಅವರು ಮುದಿಯಪ್ಪ, ಬೋರಮ್ಮ ಅವರ ವಿರುದ್ಧ ಹೂಡಿರುತ್ತಾರೆ. ವಾದಿ ಮತ್ತು ಪ್ರತಿವಾದಿಯವರು ಯರಗುಂಡನಹಳ್ಳಿ ಊರಿನವರು. ನನ್ನದು ರಾಮಸಾಗರಹಟ್ಟಿ ಗ್ರಾಮ. ಬೋರಮ್ಮ ಮತ್ತು ಪಾಪಮ್ಮ ನನಗೆ ಗೊತ್ತು. ನಾನು ಊರಿನಲ್ಲಿ ಓಡಾಡುತ್ತಿದ್ದಾಗ ಪ್ರತಿವಾದಿಯವರನ್ನು ನೋಡಿರುತ್ತೇನೆ. ಪ್ರತಿವಾದಿ ಬೋರಮ್ಮ ಮೃತಪಟ್ಟು 20 ವರ್ಷಗಳ ಮೇಲಾಗಿದೆ. ಬೋರಯ್ಯ, ಮುದಿಯಪ್ಪ, ಬನ್ನಯ್ಯ, ಹಂಪಯ್ಯರವರು ಪ್ರತಿವಾದಿ ಬೋರಮ್ಮನ ಮಕ್ಕಳು. ಬೋರಮ್ಮಳ ಗಂಡನ ಹೆಸರು ನನಗೆ ಗೊತ್ತಿಲ್ಲ. ಬೋರಮ್ಮಳ ಗಂಡನ ಹೆಸರು ಬೋರಯ್ಯ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ಜಮೀನಿನ ಸರ್ವೆ ನಂಬರ್ 314. ಅದು ನನ್ನ ಹೆಸರಿಗೆ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದರ ಚೆಕ್‌ಬಂದಿ ಪೂರ್ವಕ್ಕೆ ಸರ್ವೆ ನಂಬರ್ 319, ಪಶ್ಚಿಮಕ್ಕೆ ಅಡಿವಿ, ಉತ್ತರಕ್ಕೆ ಅಡವಿ, ದಕ್ಷಿಣಕ್ಕೆ ಸರ್ವೆ ನಂಬರ್ 313/2 ಇದೆ.

ಈಗ ನೋಡುತ್ತಿರುವ ಪಹಣಿ ಪತ್ರಿಕೆಯಲ್ಲಿ ಸರ್ವೆ ನಂಬರ್ 313/2 ಬೋರಮ್ಮ ಗಂಡ ಬೋರಯ್ಯ ಎಂದು ಇದ್ದು, ಅದು 2014-15 ನೇ ಸಾಲಿನ ಪಹಣಿ ಪತ್ರಿಕೆಯಾಗಿದ್ದು, ಅದನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದೆ. ಸಾಕ್ಷಿ ಮುಂದುವರೆದು ಬೋರಯ್ಯ ಅಡ್ಡ ಹೆಸರು ಜಗಳೂರಯ್ಯ ಎಂದು ಇರುತ್ತದೆ. ಆದರೆ ಆ ರೀತಿ ಪಹಣಿಯಲ್ಲಿ ಬರೆದಿರುವುದಿಲ್ಲ.

ಜಗಳೂರಯ್ಯನಿಗೆ ಜೊಳ್ಳು ಬೋರಯ್ಯ, ಪಾಪಣ್ಣ, ಪಾಪಮ್ಮ, ಹಂಪಮ್ಮ, ತಿಪ್ಪಮ್ಮ ಎಂಬ ಮಕ್ಕಳು ಇದ್ದಾರೆ. ಪಟ್ಟಾ ದಾಖಲಾತಿಯನ್ನು ನಾನು ನೋಡಿದ್ದು, ಅದರಲ್ಲಿ ಬೋರಮ್ಮ ಗಂಡ ಜಗಳೂರಯ್ಯ ಎಂದು ಇದೆ. ಸದರಿ ಪಟ್ಟಾ ಎಷ್ಟನೇ ಇಸವಿಯದ್ದು ಎಂದರೆ ಅದು ನನಗೆ ನೆನಪಿಲ್ಲ. ನಾನು ಈಗ ನೋಡುತ್ತಿರುವ ಪಟ್ಟಾ ನಿಪಿ 1 ರಲ್ಲಿ ಬೋರಮ್ಮ ಗಂಡ ಜಗಳೂರಯ್ಯ ಎಂದು ಇದೆಯೇ ಎಂದರೆ ಇಲ್ಲ, ಆದರೆ ಆತನ ಅಡ್ಡ ಹೆಸರು ಜಗಳೂರಯ್ಯ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪಟ್ಟಾವನ್ನು ಹೊರತುಪಡಿಸಿ ಬೇರೆ ದಾಖಲಾತಿಯನ್ನು ನಾನು ನೋಡಿರುವುದಿಲ್ಲ. ಪ್ರತಿವಾದಿ ದಾವಾ ಆಸ್ತಿಯನ್ನು ಸರ್ವೇ ಮಾಡಿಸಿದ್ದು ಎಂದರೆ ನನಗೆ ಗೊತ್ತಿಲ್ಲ. ಆಗ ಪ್ರತಿವಾದಿಗಳೇ ಸ್ವಾಧೀನದಲ್ಲಿದ್ದಾರೆ ಎಂದು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನಮಗೂ ಹಾಗೂ ಪ್ರತಿವಾದಿಗಳಿಗೆ 4 ತಿಂಗಳ ಹಿಂದೆ ಜಗಳ ಆಯಿತು ಎಂದರೆ ಇಲ್ಲ. ಆ ದ್ವೇಷದಿಂದ ಪ್ರತಿವಾದಿಗಳ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳೇ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದು, ಅದನ್ನು ಪ್ರತಿವಾದಿಗಳ ಅಜ್ಜಿ ಬೋರಮ್ಮ ಗಂಡ ಬೋರಯ್ಯ ಅವರಿಗೆ ಸರಕಾರದವರೇ ಪಟ್ಟಾ ನೀಡಿದ್ದು ಅಂದಿನಿಂದ ಅವರು ಹಾಗೂ ಅವರ ಕುಟುಂಬದವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.